International Journal of Kannada Research
www.kannadajournal.com

ISSN: 2454–5813
IJSR 2016; 2(3): 83-86
© 2016 IJKS
www.kannadajournal.com
Received: 14-04-2016
Accepted: 15-05-2016

**ಚಂದ್ರಶೇಖರ ಕೆ. ಎಲ್.**
ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ.

**Correspondence**
**ಚಂದ್ರಶೇಖರ ಕೆ. ಎಲ್.**
ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ.

# ಜನಪದರಲ್ಲಿ ನಂಬಿಕೆ ಮತ್ತು ಮೂಢ ನಂಬಿಕೆ

**ಚಂದ್ರಶೇಖರ ಕೆ. ಎಲ್.**

## ಪ್ರಸ್ಥಾವನೆ

ನಂಬಿಕೆ ಎಂದರೇನು ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಅತ್ಯಂತ ಕಷ್ಟಕರವಾದುದು. ಅನೇಕ ವಿದ್ವಾಂಸರುಗಳು ತಮ್ಮದೇ ಆದ ದೃಷ್ಟಿಕೋನದಲ್ಲಿ ವ್ಯಾಖ್ಯಾನ ನೀಡಿದ್ದಾರೆ. ಭೂಮಿಯ ಮೇಲೆ ಮಾನವನ ವಿಕಾಸವಾದಂತೆ ಜನಪದರಲ್ಲಿ ನಂಬಿಕೆಗಳು ಬೆಳೆಯಲು ಆರಂಭಿಸಿದವು. ಅಷ್ಟೇ ಅಲ್ಲದೆ ಅವು ತಮ್ಮ ಅಸ್ಥಿತ್ವವನ್ನು ಕಂಡುಕೊಂಡವು. ಅನಕ್ಷರಸ್ತ ಸಮುದಾಯದಲ್ಲಿ ಅವರು ಕಂಡು ಕೊಂಡ ಸತ್ಯವನ್ನು ಅನುಭವಗಳ ಮೂಲಕ ಹೊರಹಾಕಲು ಪ್ರಯತ್ನಿಸಿದರು. ಅವುಗಳೆ ನಂಬಿಕೆಗಳಾಗಿ ಬೆಳೆದವು. ಜನ–ಪದ ಸಾಮಾನ್ಯ ಜನರು ಆಡುವ ಭಾಷೆ, ನುಡಿ ಎಂದಾಗುತ್ತದೆ. ಅವರಲ್ಲಿನ ಅನೇಕ ವಿಚಾರಗಳು ಆಚರಣೆಗೆ ಒಳಪಟ್ಟು ರೂಢಿ ಸಂಪ್ರದಾಯಗಳಾಗಿ ಬೆಳೆದು ಬಂದವು. ಆಚರಣೆಗೂ ನಂಬಿಕೆಗಳಿಗೂ ಒಂದಕ್ಕೊಂದು ಸಂಬಂಧವಿದೆ. ಮನುಷ್ಯನ ಬುದ್ಧಿ ವಿಕಾಸವಾದೆಂತೆಲ್ಲ, ತನ್ನನ್ನೂ ಮೀರಿದ ಒಂದು ಶಕ್ತಿಯಿದೆ, ಅದನ್ನು ದೇವರು ಎಂದು ಕರೆದು ಅದಕ್ಕೆ ಒಂದು ಸ್ವರೂಪವನ್ನು ಕೊಟ್ಟನು. ಅದರ ಸುತ್ತಲೂ ಆಚರಣೆ, ರೂಢಿ, ಸಂಪ್ರದಾಯ ಇತ್ಯಾದಿಗಳನ್ನು ಬೆಳಸಿದನು.

ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ನಂಬಿಕೆ ಮೂಢನಂಬಿಕೆಗಳು ಅವರ ನೆರಳಿನಂತೆ ಅಂಟಿಕೊಂಡು ಬಂದಿರುವ ಅಂಟು ಜಾಡ್ಯಗಳು. ಕೆಲ ಬುದ್ಧಿವಂತ ಮನುಷ್ಯರು ದೇವರುಗಳನ್ನು ಮುಂದಿಟ್ಟುಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದಿರಬಹುದೇನೋ ಎಂಬ ಅನುಮಾನಗಳು ಇಂದು ಮೂಡಿಬರುತ್ತಿವೆ.

ಹುಟ್ಟು ಸಾವು ಪ್ರಕೃತಿಯ ನಿಯಮ. ಇದನ್ನು ಯಾರೂ ಮೀರಲು ಸಾಧ್ಯವಿಲ್ಲ. ನಿಯಮಾ–ನಿಯಮಗಳ ನಡುವೆ ಹೋರಾಟ ಸಾಗುತ್ತಲಿರುತ್ತದೆ. ಮಾನವ ತನ್ನ ಸುತ್ತಲು ಹಾಕಿಕೊಂಡ ನಿಯಮ ಮತ್ತು ಪ್ರಕೃತಿಯ ನಿಯಮ. ಮನುಷ್ಯನಿಗೆ ರೋಗರುಜಿನಗಳು ಬಂದು ಹೋಗುತ್ತವೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅನಿವಾರ್ಯ ಮತ್ತು ಅವಶ್ಯಕ. ಆರಂಭದಲ್ಲಿ ಮನುಷ್ಯ ತನ್ನ ರೋಗಗಳಿಗೆ ದೇವರು ಕಾರಣ ಎಂದುಕೊಂಡು, ಅವನು ನಮ್ಮ ಮೇಲೆ ಕೋಪಗೊಂಡಿದ್ದಾನೆ ಎಂದು ತಿಳಿದು, ಹರಕೆ ಹೊರುವುದು, ಬಲಿ ಕೊಡುವುದು, ತನ್ನನ್ನು ಅನೇಕ ಕಷ್ಟಗಳಿಗೆ ಒಡ್ಡಿಕೊಳ್ಳುವುದು ಇತ್ಯಾದಿಗಳನ್ನು ನಡೆಸಿ ಕೊಂಡು ಬಂದಿದ್ದಾನೆ. ಅವನ ನಂಬಿಕೆಯಂತೆ ಕಾಕತಾಳೀಯವಾಗಿ ರೋಗ ರುಜನಗಳು ಕಷ್ಟಗಳು ಪರಿಹಾರ ವಾಗುತ್ತವೆ. (ಚಿಕ್ಕ ಮಕ್ಕಳಿಗೆ ಅಮ್ಮ ಮೈಮೇಲೆ ಬರುವುದು. ದಡಾರ.) ಕೆಲವು ಸಂದರ್ಭದಲ್ಲಿ ಜನರು ದೈಹಿಕ, ಮಾನಸಿಕ, ಆಘಾತ ಮತ್ತು ನೈಸರ್ಗಿಕ ರೋಗಗಳಿಂದ ಬಳಲುತ್ತ ಅವುಗಳಿಂದ ಚೇತರಿಸಿಕೊಳ್ಳಲಾಗದೆ ದು:ಖ ತಪ್ತನಾಗಿರುವುದನ್ನು ನೋಡಿದ್ದೇವೆ. ಅವುಗಳ ಪರಿಹಾರಕ್ಕೆ ತಾನು ಕಂಡು ಕೊಂಡ ಉಪಾಯವೆ ದೇವರಿಗೆ ಬಲಿಯನ್ನು ನೀಡಿ ಬಂದ ಕಷ್ಟವನ್ನು ಪರಿಹರಿಸಿ ಕೊಳ್ಳುವುದು.

ಜನಪದರು ತಮ್ಮ ಬಯಕೆಯನ್ನು ಸಿದ್ಧಿಸಿಕೊಳ್ಳಲು ಹರಕೆಯನ್ನು ಹೊತ್ತು ಬಲಿ ಕೊಡುವ ಪದ್ಧತಿಯನ್ನು ಬೆಳಸಿಕೊಂಡು ಬಂದಿದ್ದಾರೆ. ಆರಂಭದ ದಿನಗಳಲ್ಲಿ ಬಲಿ ಪದ್ಧತಿಯು ವಿಕೃತ, ಕ್ರೂರ ಭಯಾನಕವಾಗಿ ಇತ್ತು. ದೇವಿಗೆ ತನ್ನ ಕುಟುಂಬವನ್ನು ಕಾಪಾಡಲು ತನ್ನ ಮಕ್ಕಳನ್ನೆ ಬಲಿಕೊಡುವುದಾಗಿ ಹರಕೆ ಹೊರುತಿದ್ದರು. ನರ ಬಲಿ ಕೊಡುವುದರಿಂದ ಕುಟುಂಬದ ರಕ್ಷಣೆಯ ಜವಬ್ದಾರಿಯನ್ನು ಆ ಮಾರಿಯು ಹೊರುತ್ತಾಳೆ, ಎಂಬ ನಂಬಿಕೆಯನ್ನು ಆದಿಮಾನವರು ಇಟ್ಟು ಕೊಂಡಿದ್ದರು. ಕಾಲ ಬದಲಾದಂತೆ ನರ ಬಲಿಯು ಕೇವಲ ಅಗೋರಿಗಳಿಗೆ ಸೀಮಿತವಾಯಿತು, ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಬಲಿ ಕೊಡುವುದಕ್ಕೆ ಮುಖ್ಯ ಪ್ರೇರಣೆ ಹರಕೆ ಹೊರುವುದು. ಹರಕೆ ಹೊರುವುದಕ್ಕೆ ಪ್ರೇರಣೆ, ತನ್ನಲ್ಲಿ ಇರುವ ಬಯಕೆಗಳ ಈಡೇರಿಕೆಗೆ ಮಾತ್ರ ವಾಗಿರುತ್ತದೆ. ಹೀಗೆ ಒಂದಕ್ಕೊಂದು ಸಂಬಂಧ ಇದ್ದೇ ಇರುತ್ತದೆ. ಮನುಷ್ಯನ ಬುದ್ದಿ ವಿಕಾಸ ಗೊಂಡಂತೆಲ್ಲ ಹರಕೆ, ಬಲಿ ಪೂಜೆ ಇತ್ಯಾದಿಗಳೆಲ್ಲ ಬದಲಾದವು.

ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕಿನ ಹಳೆ ಕೋಟೆ ಹೋಬಳಿಯಲ್ಲಿ ಬರುವ ಮಳಲಿ ಊರಿನಲ್ಲಿ ಇರುವ ದೇವತೆಯಾದ " ಮಳಲಿ ಗಿಡ್ಡಮ್ಮನ" ಜಾತ್ರೆಯಲ್ಲಿ ಹೊರುವ ಹರಕೆ, ಬಲಿ, ಆಚರಣೆಯನ್ನು ನೊಡಬಹುದು. ಅಲ್ಲಿನ ಜನಪದರು ತಾನು ಹೊತ್ತ ಹರಕೆಯನ್ನು ತೀರಿಸಲು ಮುಂದಾಗುತ್ತಾರೆ. ಆ ಜಾತ್ರೆಯಲ್ಲಿ ಸುತ್ತ ಮುತ್ತಲಿನ ಎಲ್ಲಾ ಹಳ್ಳಿಯ ಜಾತಿ ಜನಾಂಗದವರು ಸೇರಿ ಭಕ್ತಿಯಿಂದ ಜಾತ್ರೆಯನ್ನು ನೆರೆವೇರಿಸುವರು. ಅಲ್ಲಿನ ಜನರು ಹರಕೆಯನ್ನು ಹೊರುವ ಪರಿಯನ್ನು ಗೀತೆಯಲ್ಲಿ ಹಾಡಿ ಹೊಗಳಿ ತೀರಿಸುತ್ತಾರೆ. ಉದಾಹರಣೆಗೆ : ತಾವು ದಿನ ನಿತ್ಯ ಬಳಸುವ ಅಹಾರ ಪದಾರ್ಥಗಳಾದ ಮಡಲಕ್ಕಿ, ಬಿಳಿ ಬೆಲ್ಲ, ಹಣ್ಣು ಕಾಯಿ, ಹಾಲು ಮೊಸರು, ಅಡಿಕೆ, ಹರಿಶಿನ ಕುಂಕುಮ, ಕೊಳಿ ಕುರಿಯನ್ನು ದೇವಿಗೆ ಅರ್ಪಿಸುತ್ತಾರೆ. ಹರಕೆಯನ್ನು ಅರ್ಪಿಸದವರಿಗೆ ಕೇಡುವುಂಟಾಗುತ್ತದೆ ಎಂದು ಹಾಡಿನಲ್ಲಿ ವಿವರಿಸುವರು.

ಕೋಳಿ ಕೊಡದವರ ಮನೆಗೆ ಕೇಡುಂಟುಮಾಡೆ ಗಾಳಿಯ
ಏಳು ಮೆಟ್ಟಿದ ಎಳಗಾನ– ಕೊಡದವಳ ಮನೆಗೆ
ಲಾಲಾಡಿ ದುಸ್ತ್ರ ಹೊಡಿತಾಳೆ.

ಸ್ಯಹಾರಿಗಳು ಮತ್ತು ಮಾಂಸ ಹಾರಿಗಳು ತಮಗೆ ಇಷ್ಟವಾದುದ್ದನ್ನು ದೇವಿಗೆ ಅರ್ಪಿಸುತ್ತಾರೆ. ಹೀಗೆ ಬಲಿ ಪದ್ಧತಿಯು ಜನಪದರಲ್ಲಿ ಹಾಸು ಹೊಕ್ಕಾಗಿದೆ. ಉಗ್ರ ದೇವತೆಯ ಹಿಂದೆ ನರ ಬಲಿಯ ಕಥೆಯನ್ನು ಕಾಣಬಹುದು. ಇದು ಮಳಲಿ ಗಿಡ್ಡಮ್ಮನಲ್ಲಿಯು ಇದೆ. ಒಂದು ದಿನ ಗಿಡ್ಡಮ್ಮ ದೆವಿಯು ತನ್ನ ಭಕ್ತನಾದ ಪೂಜಾರಿಯ ಕನಸಿನಲ್ಲಿ ಬಂದು ನನಗೆ ಕೊಂಬು ಹೊಂದಿರುವ ಟಗರನ್ನು ಕಡಿದು ತಳಿಗೆ ಮಾಡ ಬೇಕೆಂದು ಪೂಜಾರಿಯನ್ನು ಪೀಡಿಸ ತೊಡಗಿದಳಂತೆ. ಅಂದಿನಿಂದ ಪೂಜಾರಿಯು ಕೊಂಬಿನ ಟಗರನ್ನು ಹುಡುಕುತ್ತಾ ಹೊರಟನಂತೆ. ಇವನು ಯಾವುದೆ ಕೊಂಬಿನ ಟಗರನ್ನು ಹಿಡಿದರೂ ಅದು ತಕ್ಷಣವೇ ಕಲ್ಲಾಗಿ ಬಿಡುತ್ತಿತ್ತಂತೆ. ಅವನು ಬಹಳ ಬೇಸರದಿಂದ ಮನೆಗೆ ಹಿಂದಿರುಗಿ ಬಂದು, ಯೋಚನೆ ಮಾಡುತ್ತಾ ಕುಳಿತು ಪರಿಹಾರವೇನೆಂದು ತಿಳಿಯದೆ ಇರುವಾಗ ಗುಡಿಗೆ ತೆರಳಿ ದೇವಿಯನ್ನು ಆರಾಧಿಸಲು ಮುಂದಾದನು. ಅವನು ಕಣ್ಣಿನಲ್ಲಿ ನೀರು ಸುರಿಸುತ್ತಾ ಭಕ್ತಿಯಿಂದ ಪೂಜಿಸುತ್ತಿರುವಾಗ, ಹೊರ ಬಾಗಿಲ್ಲಿ ಟಗರೊಂದು ಕೂಗಿತಂತೆ. ತಕ್ಷಣ ಅವನು ಕಂದಲಿಯನ್ನು ತೆಗೆದು ಒಂದೇಬಾರಿಗೆ ಎರಡು ತುಂಡು ಆಗುವಂತೆ ಕಡಿದ. ಅವನಿಗೊಂದು ಆಘಾತ ಕಾದಿತ್ತು. ಅತನ ಹತ್ತು ವರ್ಷದ ಮಗಳು ಕತ್ತರಿಸಿ ಬಿದ್ದಿದ್ದಳು. ಹೀಗೆ ಬಲಿ ಪದ್ದತಿಯು ವಿವಿಧ ರೂಪವನ್ನು ತಾಳಿರುತ್ತದೆ.

ಇನ್ನು ಜನ್ನನ ಯಶೋಧರ ಚರಿತೆಯಲ್ಲಿ ಪ್ರಾಣಿ ಬಲಿಯ ಉಲ್ಲೇಖವಿದೆ. ರಾಣಿ ಅಮೃತಮತಿಯು ಅಷ್ಟವಂಕನ ಜೊತೆ ಅನೈತಿಕ ಸಂಭಂದವನ್ನು ಕಣ್ಣಾರೆ ಕಂಡ ಯಶೋಧರ ತನ್ನ ತಾಯಿಗೆ ಸಾಂಕೇತಿಕವಾಗಿ ಕೊಳದ ಹಂಸ ಕೊಳೆತ ತಾವರೆಗೊಳದಲ್ಲಿ ಸ್ವಚಂದವಾಗಿ ನಲಿಯುತ್ತಿದ್ದ ಕನಸು ಕಂಡೆ, ಆ ಕನಸಿನಿಂದ ಮನಸ್ಸು ಭಯಗೊಂಡಿದೆ ಎಂದು ಹೇಳಿದ. ಅದನ್ನು ಸತ್ಯವೆಂದು ನಂಬಿ ತಾಯಿ ಚಂದ್ರಮತಿಯು ಕನಸು ದೋಷಪೂರ್ಣವಾಗಿದೆ ಇದರಿಂದ ತನ್ನ ಮಗನಿಗೆ ತನ್ನ ಕುಟುಂಬ ವರ್ಗದವರಿಗೆ ಕೇಡುಂಟಾಗುತ್ತದೆ ಎಂದು ಮನಸಿನಲ್ಲಿ ಬಗೆದು ಇದರ ಪರಿಹಾರಕ್ಕೆ ಚಂಡಮಾರಿ ದೇವತೆಗೆ ಕುರಿಯನ್ನು ಬಲಿ ಕೊಡ ಬೇಕು ಎಂದಳು. ಈ ಮಾತಿಗೆ ಯಶೋಧರನು ಪ್ರಾಣಿ ಹಿಂಸೆ ಮಹಾ ಪಾಪವೆಂದು ನಿರಾಕರಿಸುತ್ತಾನೆ. ತಾಯಿಯು ಮಗನ ಮಾತಿಗೆ ಒಪ್ಪದೆ ಬಲಿ ಕೊಡದಿದ್ದರೆ, ಕೊನೆಯ ಪಕ್ಷದಲ್ಲಿ ಹಿಟ್ಟಿನ ಕೋಳಿಯನ್ನಾದರು ಬಲಿ ಕೊಡ ಬೇಕು. ಇಲ್ಲವಾದರೆ ತಾನೆ ಚಂಡಮಾರಿಗೆ ಬಲಿಯಾಗಿ ದೋಷವನ್ನು ನಿವಾರಿಸುವೆನೆಂದು ಹಟವಿಡಿಯುತ್ತಾಳೆ. ಯಶೋಧರ ಚರಿತೆ ಕೃತಿಯಲ್ಲಿನ ಒಂದು ಪದ್ಯ ಭಾಗವನ್ನು ನೋಡ ಬಹುದು.

ಆದೊಡೆ ಪಿಟ್ಟಿನ ಕೋಳಿಯ
ನಾದೊಡಮಿಂದೊಂದನಿಕ್ಕವೇಳ್ಪಿದು ಮಿಕ್ಕಂ
ದಾ ದೇವಿಗೆನ್ನನಿಕ್ಕಿಯು
ಮೀ ದುರಿತಮನಿಂದು ಮಗನೆ ಪರಿಹರಿಸದಿರೆಂ

ಎಂದು ತಾಯಿಯು ನುಡಿಯುತ್ತಾಳೆ. ಇದೇ ರೀತಿಯ ಬಲಿ ಪದ್ಧತಿಯ ವಿಚಾರಗಳು ಅನೇಕ ಕೃತಿಗಳಲ್ಲಿ ಉಲ್ಲೇಖವಿದೆ. ಆಚರಣೆ, ರೂಢಿ, ಸಂಪ್ರದಾಯ, ನಂಬಿಕೆಗಳು ಜನರ ಮನದಲ್ಲಿ ಆಳವಾಗಿ ಬೇರುರಿವೆ. ಇವುಗಳನ್ನು ಸುಲಬವಾಗಿ ಬಿಡಲು ಸಾಧ್ಯವಾಗುವುದಿಲ್ಲ. ದೇವರು ಇದ್ದಾನೆ ಇಲ್ಲ ಎಂಬ ವಿಚಾರಗಳು ಹೇಗೆ ಗೊಂದಲವನ್ನು ಉಂಟುಮಾಡುತ್ತವೆಯೋ ಹಾಗೆಯೇ ಬಲಿಯ ವಿಚಾರವು ನಿಂತಿದೆ. ವಿಚಾರವಾದಿಗಳು ನಾಸ್ತಿಕರು ದೇವರನ್ನು ಒಪ್ಪದಿದ್ದರು ಕೆಲವು ಸಂದರ್ಭದಲ್ಲಿ ತಮಗೆ ಅರಿವೆ ಇಲ್ಲದೆ ದೇವರನ್ನು ಆರಾಧಿಸುತ್ತಾರೆ. ದೇವರು ಎಂಬುದು ನಂಬಿಕೆಯೋ ಮೂಢ ನಂಬಿಕೆಯೋ ತಿಳಿಯದು. ಆದರೆ ದೇವರನ್ನು ನಂಬುವವರು ಅದಕ್ಕೆ ಸಲ್ಲಿಸುವ ಹರಕೆ, ಬಲಿ, ಪೂಜ ವಿಧಾನ ಇತ್ಯದಿಯನ್ನು ಅನುಸರಿಸುತ್ತಾರೆ.

ಬಲಿ ಪದ್ಧತಿಯಲ್ಲಿ ಅನೇಕ ವಿಧಾನಗಳನ್ನು ಕಾಣುತೇವೆ. ಮಾಂಸಹಾರಿಗಳು ಹಾಗು ಸಸ್ಯಹಾರಿಗಳು ಬೇರೆ ಬೇರೆ ರೂಪದಲ್ಲಿ ಬಲಿಯನ್ನು ಕೊಡುತ್ತಾರೆ. ತಾನು ಸ್ವೀಕರಿಸುವ ಆಹಾರದ ಪದ್ಧತಿಯ ಮೇಲೆ ಬಲಿ ಕೊಡುವುದು ನಿರ್ಧರಿತವಾಗಿರುತ್ತದೆ. "ಕೊಂದಪಾಪಂ ತಿಂದ ಪರಿಹಾರವೆಂಬಂತೆ" ತಾನು ಬಲಿ ಕೊಟ್ಟ ಪ್ರಾಣಿಯನ್ನು ಅಡುಗೆ ಮಾಡಿ ಬೆಯಿಸಿ, ಎಡೆ ಇಟ್ಟು ನಂತರ ತಾನು ಸ್ವೀಕರಿಸುತ್ತಾನೆ. ವಿಚಾರವಾದಿ ಆದ ಡಾ. ಬಿ ಆರ್ ಅಂಬೇಡ್ಕರ್ ರವರು ಬಲಿ ಪದ್ಧತಿಯನ್ನು ವಿರೂಧಿಸಿ "ನಿವು ಮುಗ್ಧ ಪ್ರಾಣಿಯನ್ನು ಬಿಟ್ಟು, ಬಲಿ ಕೊಡುವುದಾದರೆ ಸಿಂಹವನ್ನು ಕೊಡಿ ಹುಲಿಯನ್ನು ಕೊಡಿ, ಚಿರತೆಯನ್ನು ಕೊಡಿ, ಅವುಗಳನ್ನು ಏಕೆ ಕೊಡುವುದಿಲ್ಲವೆಂದು" ಪ್ರಶ್ನಿಸುತ್ತಾರೆ.

ಸಾಮಾನ್ಯವಾಗಿ ಹರಕೆ ಹೊರುವವರು, ಬಲಿ ನೀಡುವವರು ಕೆಳವರ್ಗದ ಬಡವರು ಆಗಿರುತ್ತಾರೆ. ಬಡತನ, ಅನಕ್ಷರತೆ, ಅಜ್ಞಾನ, ಅವರನ್ನು ಮೂಢರನ್ನಾಗಿಸಿರುತ್ತದೆ. ಹರಕೆಯು ಬಲಿಯನ್ನು ನೀಡುವುದಕ್ಕೆ ಪ್ರೇರಣೆ ನೀಡುತ್ತದೆ. ಹರಕೆಯನ್ನು ಹೊರುವುದರಲ್ಲಿ ಜನ ಬುದ್ಧಿವಂತಿಕೆಯನ್ನು ತೊರಿಸುತ್ತಾರೆ. ತನ್ನ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಹರಕೆಯನ್ನು ಹೊತ್ತು ಅದನ್ನು ತೀರಿಸಲು ಪ್ರಯತ್ನಿಸುವರು. ಹರಕೆಯನ್ನು ತೀರಿಸಲು ಸಾಧ್ಯವಾಗದಿದ್ದಾಗ ಹರಕೆ ಹನ್ನೆರಡು ವರ್ಷವೆಂದು ಕೊಳ್ಳುತ್ತಾರೆ. ಮೇಲೆ ತಿಳಿಸಿರುವಂತೆ ಬಲಿ ಕೊಡುವುದು ಆಹಾರ ಪದ್ಧತಿಯ ಒಂದು ರೂಪ. ಬಲಿಯನ್ನು ನೀಡುವ ಸಂದರ್ಭದಲ್ಲಿ ತಾವು ಹೊತ್ತಿರುವ ಹರಕೆ ಈಡೇರಲಿ ಈಡೇರದಿರಲಿ ಬಲಿಯನ್ನು ಅವರು ನೀಡಲೇ ಬೇಕು. ಬಲಿಯನ್ನು ನೀಡದಿದ್ದರೆ ತಮಗೆ ತೊಂದರೆ ಆಗುತ್ತದೆ ಎಂದುಕೊಳ್ಳುತ್ತಾರೆ. ಹರೆಕೆಗು ಬಲಿಗೂ ಒಂದಕೊಂದು ಸಂಬಂಧವಿದ್ದರು, ಕೆಲವು ಸಂದರ್ಭದಲ್ಲಿ ಹರಕೆಯನ್ನು ಹೊರುವವರು ಬಲಿಯನ್ನು ನಿರಾಕರಿಸುತ್ತಾರೆ. ಉದಾಹರಣೆಗೆ ತಿರುಪತಿ ಮತ್ತು ಧರ್ಮಸ್ಥಳ ದೇವರುಗಳಿಗೆ ಹರಕೆಯನ್ನು ಹೊರುವಾಗ ಬಲಿ ಪದ್ಧತಿಯನ್ನು ವಿರೋಧಿಸುವರು. ಪ್ರಾಣಿ ಬಲಿಯ ಬದಲಿಗೆ ಮುಡಿಯನ್ನು ಕೊಡುವುದು, ಚಿನ್ನಾಭರಣ, ಮತ್ತು ಹಣ ಇತ್ಯದಿಯನ್ನು ಕೊಡುವುದಾಗಿ ಹರಕೆ ಹೊರುತ್ತಾರೆ. ಆಚರಣೆ ಮತ್ತು ಹರಕೆ ಒಂದಕೊಂದು ಅವಿನಾ ಭಾವ ಸಂಬಧವನ್ನು ಹೊಂದಿದೆ. ಆಚರಣೆಯ ಜೊತೆ ಜೊತೆಗೆ ಹರಕೆಯು ಅದರ ಬೆನ್ನೆಲುಬಾಗಿ ಸಾಗುತ್ತದೆ. ಆಚರಣೆ ಬದಲಾದಂತೆಲ್ಲ ಹರಕೆಯ ಸ್ವರೂಪದಲ್ಲು ಬದಲಾವಣೆಯನ್ನು ಕಾಣುತ್ತೇವೆ.

ಆಚರಣೆಗಳು ದೈವಿ ಸಂಬದಿಸಿದವುಗಳು ಆದರೆ ಮಾತ್ರ ಹರಕೆಗಳು ಹುಟ್ಟಿ ಕೊಳ್ಳಲು ಸಾಧ್ಯ. ತಾನು ಅಂದು ಕೊಂಡ ಕಾರ್ಯವು ನೆರವೇರಿದರೆ ಅಥವ ಆ ಕಾರ್ಯವು ಸುಗಮ ಗೊಂಡರೆ ಹರಕೆ ಹೊರುವುದಾಗಿ ತನ್ನ ಮನಸ್ಸಿನಲ್ಲಿ ಅಂದು ಕೊಳ್ಳುತ್ತಾನೆ. ಇದು ಹರಕೆ ಹುಟ್ಟಿಗೆ ಕಾರಣವಾಗುತ್ತದೆ. ಹರಕೆ ಹೊರುವುದು ತನ್ನ ಆರ್ಥಿಕ ವ್ಯವಹಾರದ ಅನುಗುಣವಾಗಿ ಇರುವುದನ್ನು ಕಾಣುತ್ತೇವೆ. ಬಡವರು, ಶ್ರೀಮಂತರು ತಮ್ಮ ಶಕ್ತಗನುಗುಣವಾಗಿ ಹರಕೆಯನ್ನು ಹೊರುತ್ತಾರೆ.

ಅನಾದಿ ಕಾಲದಿಂದಲು ಹರಕೆ ಹೊರುವ ಪದ್ಧತಿಯು ವಿಚಿತ್ರ ಹಾಗೂ ವಿಕೃತವಾಗಿರುತ್ತದೆ. ಆದಿ ಮಾನವನಿಂದ ಆಧುನಿಕ ಮಾನವನವರೆಗು ಇದು ಬೆಳೆದು ಬಂದಿದೆ. ನರಬಲಿಯನ್ನು ಕೊಡುವುದು ಮನುಷ್ಯನ ಅತ್ಯಂತ ಪುರಾತನ ಆಚರಣೆ. ಇತಿಹಾಸದ ಪುಟಗಳಲ್ಲಿ ಇದರ ದಾಖಲೆಗಳಿವೆ. ಹರಪ್ಪ, ಮಹೆಂಜೊದಾರೋ, ಸಿಂಧೂ ಬಯಲಿನ ನಾಗರೀಕತೆಯ ಸಂದರ್ಭದಲ್ಲಿ ಇದ್ದದಂನ್ನು ಇತಿಹಾಸ ಕಾರರು ಉಲ್ಲೇಕಿಸಿರುತ್ತಾರೆ. ಪೂರ್ವಿಕರು ನರಬಲಿಯನ್ನು ಕುಟುಂಬದ, ಸಮುದಾಯದ ಹಿತಕ್ಕಾಗಿ ತಾನು ನಂಬಿದ ಉಗ್ರ ದೇವತೆಗೆ ಬಲಿ ಕೊಡುವ ಪದ್ಧತಿಯನ್ನು ಬೆಳಸಿ ಕೊಂಡಿದ್ದರು. ಉದಾಹರಣೆಗೆ ಜನಪದ ಕಾವ್ಯವಾದ 'ಕೆರೆಗೆ ಹಾರ' ಎಂಬ ಕಥೆಯಲ್ಲಿಯೂ, 'ಮದಗದ ಕೆಂಚವ್ವನ' ಕಥೆನ ಗೀತೆಯಲ್ಲಿಯೂ ಕಾಣಬಹುದು. ಇದನ್ನು ಮುಂದೆ ಪ್ರೇರೆಪಿಸಲು ಆಕೆಯನ್ನು ಸಾಂಸ್ಕೃತಿಕ ದೈವವಾಗಿ ಆರಾಧಿಸಲು ಮುಂದಾದರು. ಅದು ಮುಂದೆ ಜನಪದರ ಹಬ್ಬವಾಗಿ ಪರಿವರ್ತನೆ ಹೊಂದಿ ಸಮುದಾಯದ ಪರವಾದ ವೀರ ಮರಣದ ಕುರುವಿಗೆ ಹಬ್ಬವಾಗಿ ಪರಿವರ್ತನೆ ಗೊಂಡು ಆಚರಣೆಗೆ ಒಳಪಟ್ಟಿರ ಬಹುದು. ಮರಣ ಹೊಂದಿದ ವ್ಯಕ್ತಿಗೆ ದೈವದ ಪಟ್ಟ ಕಟ್ಟಿ, ದೇವರನ್ನಾಗಿಸಿ ಆರಾಧಿಸಲು ಮುಂದಾಗಿರ ಬೇಕು. ನರ ಬಲಿ ಕೊಡುವುದರಲ್ಲಿ ಪುರುಷರಿಗಿಂತ ಸ್ತ್ರಿಯರನ್ನು ಬಲಿ ಕೊಡುವುದನ್ನು ಕಾಣುತ್ತೆವೆ. ಭಾಗೀರತಿಯು ಮುಗ್ಧ ಸ್ವಭಾವದ ಹೆಣ್ಣಗಿದ್ದರಿಂದ ಆಕೆಯು ತಾನು ಕೆರೆಗೆ ಬಲಿಯಾಗುತ್ತೆನೆಂದು ಅರಿತಿದ್ದರು ವಿರೋಧವನ್ನು ವ್ಯಕ್ತಪಡಿಸದೆ ಮಾನಸಿಕವಾಗಿ ಸಿದ್ಧಳಾಗುತ್ತಾಳೆ.

ಇಂದು ನರ ಬಲಿಯು ಕಾಣದೇ ಆಚರಣೆಗೆ ಒಳಗಾಗುತ್ತಿರುವುದನ್ನು ಕೆಲವು ಮಾಧ್ಯಮಗಳ ಮೂಲಕ ತಿಳಿದು ಬಂದಿರುವುದನ್ನು ಗಮನಿಸ ಬಹುದು. ವಾಮಾಚಾರ, ಮಾಟ, ಮಂತ್ರ ದಂತಹವುಗಳಲ್ಲಿ ವಿಕೃತ ಆಚರಣೆಗಳಲ್ಲಿ ಪ್ರಾಣಿ ಬಲಿ, ನರ ಬಲಿಗಳ ಪ್ರಯೋಗ ವಾಗುತ್ತಿದೆ ಎಂದು ವದಂತಿಗಳು ಇವೆ. ಹೆಚ್ಚಾಗಿ ನಿಧಿ ಶೋಧದ ಸಂದರ್ಭದಲ್ಲಿ ಹಿಂದೆ ನರ ಬಲಿಯನ್ನು ಕೊಟ್ಟು ನಿಧಿಯನ್ನು ಹೊರ ತೆಗೆಯುತ್ತಿದ್ದರೆಂದು ಹೇಳಲಾಗುತಿತ್ತು. ಕಾಲ ಬದಲಾದಂತೆ ಎಲ್ಲವೂ ಬದಲಾಗುತ್ತಾ ಬದಲಾಗ ತೊಡಗಿದೆ. ಕೆಲವು ಹಬ್ಬ ಹರಿ ದಿನಗಳಲ್ಲಿ ಪ್ರಾಣಿ ಬಲಿ ತೆಗೆದು ಕೊಳ್ಳುವುದನ್ನು ನೊಡುತ್ತೇವೆ. ಆಯುಧ ಪೂಜೆ, ದೀಪಾವಳಿ, ಬಲಿಪಾಡ್ಯಮಿ, ರಂಜಾನ್ ಇತ್ಯದಿ ಅನೇಕ ಹಬ್ಬಗಳಲ್ಲಿ ದೇವರ ಹೆಸರಿನಲ್ಲಿ ಪ್ರಣಿ ಬಲಿ ತೆಗೆದು ಕೊಳ್ಳುವುದನ್ನು ಗಮನಿಸ ಬಹುದು.

ಕೆಲವು ಹಬ್ಬವು ವರ್ಷದಲ್ಲಿ ಒಂದುಸಾರಿ ಆಚರಿಸಲ್ಪಡುತ್ತದೆ. ಗ್ರಾಮದಲ್ಲಿ ರೋಗ ರುಜನಗಳು ಕಾಣಿಸಿ ಕೊಂಡಾಗ ಗ್ರಾಮ ದೇವತೆ ಊರ ಮಾರಮ್ಮ, ಶಕ್ತಿ ದೇವತೆಗೆ ಹರಕೆ ಹೊತ್ತು ಹಬ್ಬ, ಜಾತ್ರೆಯನ್ನು ವಿಧಿ ವಿಧಾನದಿಂದ ಆಚರಿಸುತ್ತಾರೆ. ಊರ ದೇವಿಯ ಹಬ್ಬವು ಎಲ್ಲಾ ಜಾತಿಯವರಿಂದ ಆಚರಿಸಲ್ಪಡುವುದು. ಜಾತ್ರೆ ಹಬ್ಬಗಳಲ್ಲಿ ದೇವಿಗೆ ಬಲಿ ಕೊಡುವ ಸಂಪ್ರದಾಯವು ಬೆಳೆದು ಬಂದಿದೆ. ಆಚರಣೆ, ಬಲಿ ಪದ್ಧತಿ, ಹರಕೆಗಳು ಸಾವಿರಾರು ವರ್ಷಗಳಿಂದ ಬುಡಕಟ್ಟು ಜನಾಂಗದಲ್ಲಿ ನರಬಲಿಯ ರೂಪದಲ್ಲಿ ಇತ್ತು ಎಂದು ತಿಳಿದು ಬಂದಿದೆ.

ಮಾನವನ ವಿಕಾಸ ಆದಂತೆ ನರ ಬಲಿಯಿಂದ ಪ್ರಾಣಿ ಬಲಿ ಪದ್ಧತಿ ಬೆಳೆದು ಬಂದಿತು. ಆರಂಭದ ದಿನಗಳಲ್ಲಿ ಯಜ್ಞ ಯಾಗಾದಿಗಳಲ್ಲಿ ಭಯಾನಕವಾಗಿ ಹಸು, ಕುದುರೆ, ಕುರಿ ಇತ್ಯದಿ ಮುಗ್ಧ ಪ್ರಾಣಿಗಳನ್ನು ಬಲಿ ನೀಡುತ್ತಿದ್ದರು. ನಂತರದ ದಿನಗಳಲ್ಲಿ ಪ್ರಾಣಿ ಬಲಿಯು ಮಾನವನ ಆಹಾರದ ಸ್ವರೂಪವನ್ನು ಪಡೆದು ಕೊಂಡಿತು. ಒಟ್ಟಿನಲ್ಲಿ ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬಂತಿದೆ.

ಬಲಿ ಪದ್ಧತಿಯು ಕಾಲಾನಂತರದಲ್ಲಿ ಸಾಂಕೇತಿಕ ರೂಪವನ್ನು ಪಡೆದು ಕೊಂಡಿತು. ನರಬಲಿಯನ್ನು ಮತ್ತು ಪ್ರಾಣಿಬಲಿಯನ್ನು ನಿರಾಕರಿಸಿದ ಜನ ಬದಲಿ ಬಲಿ ಪದ್ಧತಿಯನ್ನು ರೂಢಿಸಿಕೊಂಡರು. ಉದಾಹರಣೆಗೆ ದೇವರಿಗೆ ಪೂಜೆ ಮಾಡಿಸುವಾಗ ಹಣ್ಣು ಕಾಯಿ ಪದಾರ್ಥಗಳನ್ನು ನೀಡುತ್ತಾರೆ. ಅದರಲ್ಲಿ ತೆಂಗಿನ ಕಾಯಿ ಹೊಡೆದು ಅದರ ನೀರನ್ನು ದೇವರಿಗೆ ಅರ್ಪಿಸುವುದು, ಬಾಳೆ ಹಣ್ಣಿನ ತೊಟ್ಟನ್ನು ಮುರಿಯುದು, ಇತ್ಯದಿ. ಇವು ನರಬಲಿ ಮತ್ತು ಪ್ರಾಣಿ ಬಲಿಯ ಸಾಂಕೇತಿಕ ರೂಪಗಳಾಗಿದ್ದವು. ಬಲಿ ಎಷ್ಟರ ಮಟ್ಟಿಗೆ ವಿಕೃತವಾಗಿತೆಂದರೆ, ಬಲಿಯನ್ನು ಹಾಕಿ ಅದರ ರಕ್ತವನ್ನು ದೇವಿಗೆ ಅರ್ಪಿಸುತ್ತಿದ್ದರು. ತೆಂಗಿನ ಕಾಯಿಯ ನೀರನ್ನು ನೈವೆದ್ಯಗೆ ಬಳಸಿ ಅದನ್ನು ತೀರ್ಥವೆಂದು ಇಂದು ಬಳಸುತ್ತಾರೆ. ಅಂದು ಬಲಿಯನ್ನು ನೀಡಿದ ರಕ್ತವನ್ನು ಹಣೆಗೆ ದರಿಸುತ್ತಿದ್ದರೆ, ಇಂದು ಅದರ ಸಾಂಕೇತಿಕ ರೂಪವಾಗಿ ಹಣೆಗೆ ಕುಂಕುಮವನ್ನು ಇಡುತ್ತಾರೆ (ಕುಂಕುಮಾರ್ಚನೆ ಎಂಬ ಪೂಜಾ ವಿಧಾನವಿದೆ.) ಹರಿಶಿಣ ಹಚ್ಚುವುದು ಕೂಡ ಬಲಿಯ ಒಂದು ಸಾಂಕೇತಿಕ ರೂಪವಾಗಿದೆ. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಮಾರಿಕಾಂಬಾ ಜಾತ್ರೆಯಲ್ಲಿ ನಡೆಯುವ ಬಲಿ ಪದ್ಧತಿಯನ್ನು ನೊಡಬಹುದು. ಈ ಜಾತ್ರೆಯು ಸುಮಾರು ವರ್ಷಗಳಿಂದ ನಡೆದು ಕೊಂಡು ಬಂದಿದೆ. ಈ ಜಾತ್ರೆಗೆ ತನ್ನದೇಯಾದ ಕಥೆ ಪೂರಾಣ ಐತಿಹ್ಯವಿದೆ. ಬ್ರಾಹ್ಮಣ ಜಾತಿಗೆ ಸೇರಿ ಹೆಣ್ಣನ್ನು ಕೆಳಜಾತಿ ಹುಡುಗ ಮೊಸದಿಂದ ಮಧುವೆ ಆಗುತ್ತಾನೆ. ಈ ವಿಷಯ ಹೇಗೋ ತಿಳಿಯುತ್ತದೆ. ನಂತರ ಆಕೆ ಉಗ್ರ ರೂಪವನ್ನು ತಾಳುತ್ತಾಳೆ, ಅವಳಿಂದ ತಪ್ಪಿಸಿಕೊಂಡು ಹೊಗಿ ಕೋಣದ ದೇಹದೊಳಗೆ ಪ್ರವೇಶಿಸುತ್ತಾನಂತೆ. ಇದನ್ನು ಕಂಡು ಮಾರಿಯ ರೂಪವನ್ನು ತಾಳಿದ್ದ ಆ ಹೆಣ್ಣು ಮಗಳು ಕೋಣವನ್ನೆ ಬಲಿ ತೆಗೆದು ಕೊಂಡಳಂತೆ. ಅಂದಿನಿಂದ ಜನರು ಆಕೆಯನ್ನು ಪೂಜಿಸಿ ಜಾತ್ರೆಯ ದಿನದೊಂದು ಕೋಣವನ್ನು ಕತ್ತರಿಸಿ ಬಲಿ ಕೊಡುವ ಪದ್ಧತಿಯನ್ನು ಬೆಳಸಿ ಕೊಂಡು ಬಂದಿದ್ದಾರೆ. ಪರಂಪರೆಗೆ ಅನುಗುಣವಾಗಿ ಅಂದಿನಿಂದ ಇಂದಿನ ವರೆಗು ಜಾತ್ರೆಯನ್ನು ಮಾಡಿ ಕೊಂಡು ಬಂದಿದ್ದಾರೆ. ಬಲಿ ವಿಧಾನವು ಇಂದು ತನ್ನ ಸ್ವರೂವನ್ನು ಬದಲಾಯಿಸಿ ಕೊಳ್ಳುತ್ತಾ ಆಚಾರಣೆಯಾಗಿ ನಡೆದು ಕೊಂಡು ಬಂದಿದೆ. ಜಾತ್ರೆಯು ಜನಪದರಲ್ಲಿ ನಂಬಿಕೆ ಆಚರಣೆಯಾಗಿ ಬೆಳೆದು ಬಂದಿದೆ. ದೇವಿಯ ಜಾತ್ರೆಯ ನಂತರವು ಅದರ ವಿಧಿ ವಿಧಾನವು ಇರುತ್ತದೆ.

ಬಲಿಯ ನಂತರದಲ್ಲಿ ದೇವಿಗೆ ಮೆರವಣಿಗೆಯನ್ನು ಮಾಡಲಾಗುತ್ತದೆ. ಮೆರವಣಿಗೆಯ ಕೊನೆಯಲ್ಲಿ ರಥವನ್ನು ಹಿಮ್ಮುಖವಾಗಿ ತಿರುಗಿಸಿ, ನಮ್ಮ ಶಕ್ತಿ ಮೀರಿ ನಿನಗೆ ಪೂಜೆ ಸಲ್ಲಿಸಿದ್ದೇವೆ. ನಮ್ಮಿಂದ ಯಾವುದಾದರೂ ತಪ್ಪುಗಳು ಆಗಿದ್ದರೆ ಕ್ಷಮಿಸು. ಊರಿನ ಕೆಡುಕು, ಕಾಯಿಲೆ ಇವುಗಳನ್ನೆಲ್ಲಾ ನಿನ್ನೊಂದಿಗೆ ಕೊಂಡೊಯ್ಯಿ ಮುಂದಿನ ಬಾರಿ ಮತ್ತಷ್ಟು ವಿಜೃಂಭಣೆಯಿಂದ ನಿನ್ನನ್ನು ಕರೆಸಿಕೊಳ್ಳುತ್ತೇವೆ. ಎಂದು ಪ್ರಾರ್ಥಿಸಲಾಗುತ್ತದೆ. ನಂತರ ದೇವಿಯನ್ನು ವನಕ್ಕೆ ಬಿಡುವ ಕಾರ್ಯಕ್ರಮದೊಂದಿಗೆ ಜಾತ್ರೆ ಮುಕ್ತಾಯಗೊಳ್ಳುತ್ತದೆ.

ಜನಪದ ನಂಬಿಕೆಗಳಲ್ಲಿ ಒಂದು ಭಾಗವಾಗಿರುವ ಬಲಿ ಪದ್ಧತಿಯು ಆಧುನಿಕ ಕಾಲದಲ್ಲು ಮುಂದುವರೆದು ಕೊಂಡು ಬಂದಿದೆ. ಜನರು ಮೂಢ ನಂಬಿಕೆಗೆ ದಾಸರಾಗಿ ಇಂದು ಸಹ ದೇವರ ಹೆಸರಿನಲ್ಲಿ ಪ್ರಾಣಿ ಬಲಿಯನ್ನು ನೀಡುತ್ತಿದ್ದಾರೆ. ಆಧುನೀಕರಣ, ಕೈಗಾರೀಕರಣ,

ನಗರೀಕರಣದಿಂದ ಎಷ್ಟೇ ಬದಲಾದರು ತಲೆತಲಾಂತರದಿಂದ ಬಂದಿರುವ ಕೆಲವು ರೂಢಿ, ಸಂಪ್ರದಾಯ, ಪರಂಪರೆಯನ್ನು ಉಳಿಸಿ ಕೊಂಡು ಬಂದಿದ್ದಾರೆ. ವೈಚಾರಕ, ವೈಜ್ಞಾನಿಕ ದೃಷ್ಟಿಕೋನದಿಂದ ಬಲಿ ಪದ್ಧತಿಯು ತಪ್ಪೆಂದು ತಿಳಿದರು ಅದನ್ನು ಆಚರಿಸಿ ಕೊಂಡು ಬಂದಿರುವುದನ್ನು ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು**


1. ಅಂಬಳಿಕೆ ಹಿರಿಯಣ್ಣ – ಜಾನಪದ
2. ಕೋವೂರ್ ಲೇಖನಗಳು – ದೇವರು ದೆವ್ವ ವಿಜ್ಞಾನ (ಸಂಪಾದಕ) ಪುರುಶೋತ್ತಮ ಬಿಳಿಮಲೆ
3. ಕೃಷ್ಣಕುಮಾರ್ ಸಿ.ಪಿ. – ಜಾನಪದ ಸಾಹಿತ್ಯ ಪ್ರವೇಶಿಕೆ
4. ಶ್ರೀ. ಗೋ.ಕು.ಚ –ಜಾನಪದ ಸ್ವರೂಪ
5. ಪರಮಶಿವಯ್ಯ ಜೆ.ಶಂ. –ಕರ್ನಾಟಕ ಜಾನಪದ ಸಮೀಕ್ಷೆ
6. ನರಸಿಂಹಯ್ಯ ಎನ್. – ನಂಬಿಕೆ ಮತ್ತು ಮೂಡನಂಬಿಕೆಗಳು
7. ರಮಹತ್ ತರೀಕೆರೆ – ಪ್ರತಿ ಸಂಸ್ಕೃತಿ.
8. ರಾಗೌ – ಜನಪದ ಸಾಹಿತ್ಯ ರೂಪಗಳು
9. ಲಕ್ಕಪ್ಪಗೌಡ –ಮಲೆನಾಡು ಜಾನಪದ
10. ಲಿಂಗಣ್ಣ ಚಿ.ಸಿ. –ಕನ್ನಡ ಸಾಹಿತ್ಯ ಸಾಂಸ್ಕೃತಿ ಕೋಶ
11. ವೀರಣ್ಣದಂಡೆ – ಸುವರ್ಣ ಜಾನಪದ ಲೇಖನಗಳು
12. ಹಾ.ಮಾ. ನಾಯಕ್ –ಜಾನಪದ ಸ್ವರೂಪ
13. ಹಿರೇಮಠ್ ಎನ್.ಎನ್ –ಜಾತ್ರೆಗಳು
14. ಸಿದ್ದಲಿಂಗಯ್ಯ – ಗ್ರಾಮದೇವತೆಗಳು
15. ಮೂರ್ತಿರಾವ್ ಎ. ಎನ್. – ದೇವರು
16. ವಸಂತಕುಮಾರ್ ಎಂ ಸಿ. _ ಮಳಲಿ ಗಡ್ಡಮ್ಮ. ಸಂಪಾದಕರು ಮೈಸೂರು ವಿವಿ.